ಏನೇ ಇರಲಿ, ಆಲನಹಳ್ಳಿಯವರು ಕಿಟ್ಟಿಯ ಪಾತ್ರವನ್ನು ಪೌರುಷದ ಕ್ರೌರ್ಯವನ್ನು ಸೋಂಕಿಸದೆ ಮಲಿನಗೊಳ್ಳದ ವ್ಯಕ್ತಿತ್ವವೊಂದರ ನವಿರಾದ ತುಣುಕಾಗಿ ಚಿತ್ರಿಸಿದ್ದಾರೆ. ಅದಕ್ಕೆ ಕಾರಣ ಸ್ಪಷ್ಟ; ಕಿಟ್ಟಿ ಇನ್ನೂ ಕಿರಿಯವನೆಂಬುದು. ಕಿಟ್ಟಿಗೆ ಕಾದಂಬರಿಯೊಳಗೆ ಪುರುಷಹಂಕಾರವಿರುವ ಮಾವ ಚಂದ್ರೇಗೌಡ, ಅತ್ತೆ ಕಮಲಮ್ಮಳಿಗೆ ಸದಾ ಹೊಡೆಯುವ ಬಗ್ಗೆ ತೀವ್ರಗತಿಯ ಕೋಪ ಮತ್ತು ಭಯವಿದೆ. ನನ್ನತ್ತೆಗೂ ಕಮಲಮ್ಮಳಿಗೂ ಹಲವು ವಿಚಾರಗಳಲ್ಲಿ ಸಾಮ್ಯತೆ ಇದೆ. ತನ್ನನ್ನು ತನ್ನ ಮಕ್ಕಳನ್ನು ಬಿಟ್ಟು ಹೋಗಿ ಬೇರೆ ಹೆಣ್ಣನ್ನು ಮದುವೆಯಾದ ತನ್ನ ಗಂಡ ಹಿಂದಿರುಗಿ ತನ್ನ ಬಳಿ ಬರಲಿ– ಎಂಬ ಕಣ್ಣೀರಿಂದ ಕೂಡಿದ ದುವಾ ಆಕೆಯ ನಮಾಜ಼್ನ ಕೊನೆಯಲ್ಲಿ ಸದಾ ಅಡಕವಾಗಿರುತ್ತಿತ್ತು. ಮಾತ್ರವಲ್ಲ ಇರೋಬರೋ ಎಲ್ಲಾ ಮೌಲ್ವಿಗಳ ಬಳಿಗೂ, ಇಸ್ಮ್ ಮಾಡುವ ಉಸ್ತಾದರ ಬಳಿಗೂ ಅತ್ತೆ ಹೋಗಿ ಮಂತ್ರ- ತಂತ್ರಗಳನ್ನು ಮಾಡಿ ತನ್ನ ಗಂಡನನ್ನು ತಿರುಗಿ ಪಡೆಯುವುದಕ್ಕಾಗಿ ತಂತ್ರ ರೂಪಿಸುತ್ತಿದ್ದಳು. ಆಗೆಲ್ಲ ಅತ್ತೆಯ ಜೊತೆಗೆ ಹೋಗುತ್ತಿದ್ದವನು ನಾನು. ಕೆಲವು ಬಾರಿ ಮೈಮೇಲೆ ಜಿನ್ ಬರುವವರ ಬಳಿ ಹೋದಾಗಲಂತೂ ಕತ್ತಲೆ ಕೋಣೆಯೊಳಗೆ ಭಯಾನಕ ವಾತಾವರಣದಲ್ಲಿ ಅತ್ತೆಯ ಬುರ್ಕಾದ ಕಪ್ಪನ್ನು ಕಣ್ಣಿಗೆ ಅಡ್ಡಲಾಗಿರಿಸಿಕೊಂಡು ಅತ್ತೆಯನ್ನು ಅಪ್ಪಿಕೊಳ್ಳುತ್ತಿದ್ದೆ.

ಕಿಟ್ಟಿಯ ಅತ್ತೆ ಕಮಲಮ್ಮ, ತನ್ನ ಗಂಡ ಚಂದ್ರೇಗೌಡನು, ಬಸಕ್ಕನ ಸಹವಾಸ ಬಿಡಲು ಕಿಟ್ಟಿಯನ್ನು ಜೊತೆಗೂಡಿಸಿ ಹನುಮಂತರಾಯನ ಗುಡಿಗೆ ಹೋಗುವ ಪ್ರಸಂಗ; ಮಣ್ಣಿನ ಬೊಂಬೆ, ಕೆಂಪು ಅನ್ನದ ರಾಶಿ, ಬಲಿ ನೀಡುವ, ಕಿಟ್ಟಿಯ ಮುಂದೆ ಹನಿಗಣ್ಣಾಗುವ ಘಟನೆಗಳನ್ನು ಕಾದಂಬರಿಯಲ್ಲಿ ಓದಿದಾಗ ನನ್ನತ್ತೆಯ ಬದುಕಿನ ಘಟನೆಗಳಂತೆ ಕಾಡಲಾರಂಭಿಸಿತು.

ಕಿಟ್ಟಿಯು ಕಾದಂಬರಿಯ ಉದ್ದಕ್ಕೂ ಒಡನಾಡುವುದು, ಆಪ್ತವಾಗಿ ಬೆರೆಯುವುದು ಹೆಣ್ಣು ಲೋಕ ಮತ್ತು ಪ್ರಾಣಿ ಪ್ರಕೃತಿ ಜಗತ್ತಿನ ಜೊತೆಯಲ್ಲಿ. ಅತ್ತೆ ಕಮಲಮ್ಮ, ಬಾಲ್ಯಕಾಲದ ಸಖಿ ಸಹಪಾಠಿ ನಾಗಿ, ನಾಗಿಯ ಚಿಕ್ಕವ್ವ ಕಲ್ಯಾಣಿ, ಚಂದ್ರೇಗೌಡರ ಜೊತೆಯಲ್ಲಿ ಸಂಬಂಧವಿರುವ ವಿಧವೆ ಬಸಕ್ಕ, ಸದಾ ನೆನಪಾಗುವ ಊರಿನಲ್ಲಿರುವ ಅವ್ವ, ಸುಶಿ, ಅಜ್ಜಿ, ತನ್ನ ಮನೆಯ ಹಸು ಗೌರಿ, ನಾಯಿ ಮೊಣ್ಣ, ಹೊಸೂರು ಕೊಪ್ಪಲು ಸುತ್ತ ಹಬ್ಬಿರುವ ಕಾಡೇ ಕಿಟ್ಟಿಯ ಭಾವಪ್ರಪಂಚ. ಆ ಮೂಲಕ ಪ್ರಕೃತಿಯನ್ನೇ ಮೂಲಧಾರವಾಗಿಟ್ಟುಕೊಂಡು ಸ್ತ್ರೀ ಜಗತ್ತನ್ನು ಮಕ್ಕಳ ಜಗತ್ತಿನೊಂದಿಗೆ ಸಂಧಿಸುವ ಪ್ರಯತ್ನ ಕಾದಂಬರಿಯೊಳಗೆ ಸಾಧ್ಯವಾದಂತೆ ತೋರುತ್ತದೆ.

ಇದೇ ಬಗೆಯ ಸ್ತ್ರೀ ಜಗತ್ತು ನನ್ನ ಬಾಲ್ಯಕಾಲವನ್ನು ಪೊರೆದಿದೆ. ನಾಲ್ಕನೆಯ ತರಗತಿ ಓದಿದ ನನ್ನ ಉಮ್ಮನಿಗೆ ಪುಸ್ತಕ ಓದುವ ವಿಪರೀತ ಚಟ. ಉಮ್ಮ ಹೇಳುತ್ತಿದ್ದ ಕಥೆಗಳು, ಬಾಪ ನಡೆಸುತ್ತಿದ್ದ ಹೋಟೆಲ್‌ಗೆ ಬೇಕಾದ ತಿಂಡಿ ತಿನಿಸು ತಯಾರಿಸುತ್ತಿದ್ದ ಉಮ್ಮ, ಅತ್ತೆ, ಭಯಾನಕವಾದ ಸುಳ್ಳು ಸುಳ್ಳೆ ಕಥೆಗಳನ್ನು ಹೇಳಿ ನನ್ನ ಪುಕ್ಕಲನನ್ನಾಗಿಸಿದ ಪುತ್ತುಮೊಳು, ಪಾತ್ರೆ ತೊಳೆಯಲು ಬರುತ್ತಿದ್ದ ಸೋಮಜ್ಜಿ, ಕೆಂಚಜ್ಜಿ, ತೋಟಕ್ಕೆ ಕಾರ್ಮಿಕರಾಗಿ ಬರುತ್ತಿದ್ದ ಕುಪ್ಪಕ್ಕ, ರಾಣಿಯಕ್ಕ, ಕಾವೇರಕ್ಕ ಎಲ್ಲರೂ ತುಂಬು ಪ್ರೀತಿಯನ್ನೇ ಉಣಬಡಿಸಿದ್ದು. ಅವರುಗಳಿಗೆ ತೋಟದಲ್ಲಿ ಸಿಗುವ ಕಿತ್ತಳೆ, ಕಾಡುಮಾವಿನ ಸಣ್ಣ ಪಾಲೊಂದು ನನ್ನೊಡಲು ಸೇರುತ್ತಿತ್ತು. ಬೆಳಗ್ಗೆ ದೋಸೆ ಹೊಯ್ಯುತ್ತಿದ್ದ ಅತ್ತೆಯ ಮಡಿಲಿಗೆ ಎದ್ದಕೂಡಲೇ ನಾನು ಹಲ್ಲುಜ್ಜದೇ ಹಾರಿಬಿಡುತ್ತಿದೆ. ಸೌದೆ ಒಲೆಯ ಮುಂದೆ ದೋಸೆ ಹೊಯ್ಯುತ್ತಲೇ ಮುದ್ದಾಡುವ ಅತ್ತೆಯ ಪ್ರೀತಿಯನ್ನು ಮತ್ತಾರೂ ತುಂಬಲು ಸಾಧ್ಯವಿಲ್ಲ. ಅಂತಹ ಅತ್ತೆಯ ಗಂಡ ಯಾವ ಕಾಲಕ್ಕೂ ಹಿಂದಿರುಗಲೇ ಇಲ್ಲ. ಅತ್ತೆಯ ದುವಾಕ್ಕೆ ಕಬೂಲ್ ಸಿಗಲೇ ಇಲ್ಲ. ಸುಮಾರು 20 ವರ್ಷಗಳ ಕಾಲ ನಮ್ಮ ಜೊತೆಯಲ್ಲಿಯೇ ಇದ್ದ ಅತ್ತೆ ಅವರ ಮಗನ ಮದುವೆಯ ನಂತರ ಬೇರೆ ಮನೆಗೆ ಹೊರಟು ಹೋಗುವಾಗಲಂತೂ ನನ್ನ ದುಃಖಕ್ಕೆ ಎಲ್ಲೆಯೇ ಇರಲಿಲ್ಲ. ಆದರೂ ಅತ್ತೆಯನ್ನು ಬಿಟ್ಟು ಯಾಕೆ ಮಾವ ಬೇರೆ ಮದುವೆಯಾದ? ಅಂತಹ ಸಮಸ್ಯೆಗಳು ಅವರ ನಡುವೆ ಏನಿತ್ತು ಎಂಬುದು ನನ್ನ ಬಾಲ್ಯಕಾಲಕ್ಕೆ ನಿಲುಕಿರಲಿಲ್ಲ.

ಅಂತೆಯೇ ಪ್ರತಿ ರಾತ್ರಿಯಲ್ಲೂ ತಮ್ಮನ್ನು ಬಿಟ್ಟು ಮಾವ ಹೊರಡುವುದೆಲ್ಲಿಗೆ ಎಂಬುದು ಕಿಟ್ಟಿಯ ಪ್ರಶ್ನೆ. ಈ ಕ್ರಿಯೆಯಿಂದಾಗಿ ಅತ್ತೆಯ ಕಣ್ಣೀರು, ಮಾವ ಕೆಟ್ಟವನು ಎಂಬ ಭಾವ ಕಿಟ್ಟಿಯನ್ನು ಕಾಡದೆ ಉಳಿಯುವುದಿಲ್ಲ. ಮಾತ್ರವಲ್ಲ ತನ್ನನ್ನು ಮಮಕಾರದಿಂದ ಕಂಡು ಕೈತುತ್ತು ಉಣಿಸುವ, ನಾಚಿಕೆಯಿಂದಲೇ ಅತ್ತೆಯ